ಹೊಸತಲೆಮಾರಿನ ಕಥೆಗಾರ ಆನಂದ ಎಸ್. ಗೊಬ್ಬಿ ಅವರು ಯಾದಗಿರಿ ಜಿಲ್ಲೆಯ ವಡಗೇರದಲ್ಲಿರುವ ಐಕೂರ ಎಂಬ ಹಳ್ಳಿಯವರು. ತನ್ನೂರಿನ ಭಾಷೆಯನ್ನು ಕಥೆಗಳಲ್ಲಿ ಹೆಣೆಯುವ ಪ್ರಯತ್ನ ಮಾಡುತ್ತಿರುವ ಅವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಓದಿ, ಬಿ.ಎಡ್ ಅಧ್ಯಯನದ ಬಳಿಕ ಈಗ ಶಿಕ್ಷಕರಾಗಿದ್ದಾರೆ. 'ನಿರುದ್ಯೋಗಕ್ಕೆ ಹೆಣವಾದ ಅಪ್ಪ' ಅವರು ಬರೆದ ಕಥಾಸಂಕಲನ.

ಇಣುಕುತ್ತಿದ್ದರೂ ಖಬರಿಲ್ಲದೆ ಬರಿ ಮೈಯಲ್ಲಿದ್ದು ಕೈಯಾಗ ಗಂಗಳ ಹಿಡಿದು ಕಪರಾಡಿ ಅನ್ನ ತಿಂತಿದ್ವು. ಒಮ್ಮೆ ನನ್ನ ದಿಟ್ಟಿಸಿ ನೋಡಿಕೇಸಿ ತಮ್ಮ ಪಾಡಿಗೆ ತಿನ್ನತೊಡಗಿದವು. ಹಾಗೆ ಎಡಕನ್ನೊಮ್ಮೆ ಸುತ್ತನ ಕಡಿಗೆ ತಿರುಗಿಸುತ್ತಿದ್ದಂತೆ ಈಚ್ಚಲ ಪರಕಿಯಿಂದ ಮಾಡಿದ ಬಚ್ಚಲದ ಚಾಟಿಗೆ ಮುದುಕಿಯೊಂದು ಎಡಗೈಯಲ್ಲಿ ಸಪೋರ್ಟಿಗೆ ಬಡಗಿ ಹಿಡಕೊಂಡುಕೇಸಿ ಇನ್ನೊಂದು ಕೈಯಿಂದು ಮೊಣಕಾಲ ಮಟ್ಟ ಗಬ್ಬಾದ ದಡಿ ಹರಿದ ಸೀರೆಯನ್ನು ಹಿಡಿದು ನಡಿತಿತ್ತು. ನಾನು ತಿರುಗಿ ನಿಂತು ಅವನೆಲ್ಲಿ ಇರ್ತಾನಂತ ದಿಟ್ಟಿಸಿ ನೋಡಕತ್ತಿದ್ದೆ. ನನಗೆ ಒಂತರ ಮುಜುಗರ ಇಟ್ಟಿತ್ತು. ಈ ಮೊದಲು ನಾನಿಲ್ಲಿಗೆ ಬಂದಿರಲಿಲ್ಲ. ಒಂದು ಜಾಲಿ ಗಿಡದ ಕೆಳಗೆ ಎಂಟತ್ತು ಮಂದಿ ಗುಂಪು ಸೇರಿದ್ದು ನಿಂತಲ್ಲಿಗೆ ಕಂಡಿತು. ತಡಾಗದೆ ಆ ಗುಂಪಿನಿಂದ ಹೆಂಗಸು ಗಂಡಸು ಸೆರಗಿನಲ್ಲಿ ದೋತ್ರದ ಮುಡ್ಡೆದಲ್ಲಿ ಬಚ್ಚಿಟ್ಟುಕೊಂಡು ಮುಚ್ಚಿಟ್ಟುಕೊಂಡು ಸರ ಸರ್ರನೇ ಹೋಗುತ್ತಿದ್ದರು.

ಸುತ್ತುಗಟ್ಟಿದ ಟೊಂಕದಾಗಿನ ಎಲುಬು ಕಾಣುವಂತ ಎರಡ್ಮೂರು ಹಂಡ ಬಂಡ ನಾಯಿಗಳು ತಿನ್ನೋ ಸಲುವಾಗಿ ತಮ್ಮಲ್ಲೇ ಭಾರಿ ಪೈಪೋಟಿ ಬಿದ್ದಂಗ ಕಡದಾಡಿದ್ದು ಕಂಡಿತು. ನನಗೆ ಪಟ್ಟಕ್ಕನೆ ಏನೆಂಬುದು ಹೊಳಿಲಿಲ್ಲ. ಅವರಲ್ಲಿಗೆ ಹೋಗಕ್ಕು ಆಗದೆ ನಿಂತ ಜಾಡಿ ಮ್ಯಾಗ ನಿಂತಕಂಡೆ. ಸುತ್ತನ ಕಡೆ ಕಣ್ಣಾಯಿಸಿ ನೋಡಕತ್ತಿದ್ದೆ. ಭೋರಿಂಗಿಂದ ನೀರು ಹೊಡಕೊಂಡು ಹೋಗರು ಹೋಗತ್ತಿದ್ದರು. ಮನಿ ಮುಂದಿನ ಅಂಗಳಾಗ ಹೆಂಗಸ್ರು ಬಟ್ಟಿ ತೊಳಿಯವ್ರು ತೊಳಿತ್ತಿದ್ರು. ಹಿಂಗಾ ತಮ್ಮಮ್ಮ ದವತಿನ್ಯಾಗ ತಾವು ಇದ್ದದ್ದು ಕಂಡಿತು. ಇದ್ದಕಿದ್ದಂಗ ಗುಂಪಿನಲ್ಲಿದ್ದವರು ನಿರಾಸೆಯಿಂದ ಎದ್ದು ಹೊಂಟರು. ಕಲರ್ ಕಲರಿನ ಲೊಂಡಂಗಿಯಂತ ಪೈಜಾಮ್ ಉಟ್ಟು ದಮ್ಮನ ಕಟಗರ ಮುದುಕಿಯೊಂದು ಎಂಡಡಗಿಯಂತ ಕುಂಡಿ ಮ್ಯಾಗ ಹತ್ತಿದ ದೂಳನ್ನು ಜಾಡಿಸಿಕೊಂಡು ಬಟ್ಟೆಯನ್ನು ಕೊಂಕಳದಾಗ ಬಡಿದುಕೊಂಡು ನಾಯಿಗಳಿಗೆ, 'ಅಚ್ಚ್ಯಾ ಅಚ್ಚೆ' ಎನ್ನುತ್ತಾ ಮಣ ಭಾರದ ಕಾಲುಗಳನ್ನು ಸಂಕ್ಟದಿಂದಲೇ ಕಿತ್ತಿಟ್ಟುಕೊಂತ ಹೊಂಟಳು. ಎದ್ದು ಹೊಂಟವರು, 'ನಮಗ ಹ್ವಾದ ವಾರನೂ ಸಿಕ್ಕಿಲ್ಲ, ಇದವಾರನೂ ಹಂಗೆ ಆಯ್ತುನೋಡ್' ಎಂದು. 'ಖಲಸಾತ್ss ಖಲಸಾತ್ss' ಎಂದು ಗೊಣಿಗಾಡಿದ್ದು ಪಟ್ಟಕ್ಕನೆ ಕಿವ್ಯಾಕ್ ಬಿತ್ತು. ಇಂತಹದ್ದು ತಿಂದುಕೇಸಿನೆ ಅವನು ಹಂಗಿದ್ದಾನೆ ಕಟ್ಟು ಮಸ್ತಾಗಿ ಅನಿಸಿತಿತ್ತು. ಜಡ್ಡು ಜಾಪತ್ತಿಗೆ ಕಂಡ ಭಾಳ್ ಭೇಸ್ ಅಂತ ಕೇಳಿದ್ದೆ. ಹಿಂದಕ್ಕೆ ನಮ್ಮವ್ವಗೂ ಜಡ್ಡು ಹತ್ತಿದಾಗ ನಮ್ಮಪ್ಪ ಗಪ್ಪಲೇ ತಂದು ಅಡಿಗಿ ಮಾಡಿ ಉಣ್ಣುತ್ತಿದ್ದಿದ್ದು ನೆನಪಿಗೆ ಬಂತು. ಅವ್ವಗ ಉಣ್ಣುವುದರ ಜತಿಗೆ ನಮ್ಮಪ್ಪನೂ ಉಣದು ರಾಟಿ ಹಚ್ಚಿಕೊಂಡಿದ್ದ. ಕೊನೆಗೆ ಜಡ್ಡು ಅವ್ವನನ್ನ ಬಿಡಲಿಲ್ಲ. ಅವನಿದ್ದ ಓಣಿಗಿ ಸೈತ ಬಂದು ಹುಡ್ಕಿದರು ಕಾಣವಲ್ಲದ್ದಕ್ಕ ಚಿಂತಿ ಬಲೇಟಿ ಹತ್ತಿತ್ತು. ಹೆಂಗಸರೆಲ್ಲ ನನ್ನನ್ನೇ ನೋಡಕತ್ತ್ಯಾರಲ್ಲಪ್ಪ ಅನ್ಕಳ್ಳರದಾಗ, 'ಯಾಕೆಪ್ಪ ಬಲೇಟಿ ಬಂದಿಯಲ್ಲ ಈಕಡಿಗಿ, ಏನಾನ ಕೆಲ್ಸ ಗಿಲ್ಸ ಇತ್ತೇನ್? ಯಾರನ್ನ್ ಬೇಕಿತ್ತು' ಹೀಗೆಂದ ಮುದುಕಿ ಆಗಾಗ ನಮ್ಮ ಕಡೆಗೆ ಬರ್ತಿದ್ಳು. ನಾನು, 'ಇಲ್ಲಮ್ಮ, ಹೌದಮ್ಮ' ಎನ್ನುತ್ತಾ ಹಲ್ಲು ಕಿರಿದು ಅವುರಾಳಗ ಆಕೆಯ ಮಾತಿನಿಂದ ಪಾರಾದೆ.

ಹಿಂಗಾ ಮಾತಾಡಿಸ್ತಿದಾಗ ಸಂಕ್ಟ ಕುತ್ತಿಗೆ ಬಂದು ಕೂಡ್ತಾದ. ಜೀವ ಕಚ್ಚ್ ಅಂತಾದ. ಒಂದ್ ಚಣ ಕಾಲು ನಿಂದ್ರಲಾರದೆ ಸೀದಾ ಮನಿಗಿ ಹ್ವಾದವನೆ ಮಂಚಕ್ಕೆ ಅಡ್ಡಾದೆ. ಸುಮ್ಮಿ ತಡ ಮಾಡದೆ ಚೆಂಬಿಗಿ ನೀರು ತಂದು ಕೊಟ್ಟಳು. ಕೆಳಗಿಳಸದೇ ಪೂರಾ ಗಟ ಗಟ ಕುಡಿದು ಇಟ್ಟೆ. ಈಗೀಗ ಸುಮ್ಮಿಯೊಂದಿಗೆ ಕೂಡಲಾಗದ್ದಿರಲಿ, ಚೆಂದನಾಗಿ ಕುಂತು ನಾಕು ಮಾತು ಸೈತ ಆಡಿರಲಿಲ್ಲ. ಅವ್ವ ಸತ್ತ ವರ್ಷನೇ ಮಾಡಿಕೊಂಡೆ. ಹಿಂದಲೇ ಮುಟ್ಟು ನಿಂತ ಫಲಕ್ಕೆ ತಾಯಿಯನ್ನೇ ಮರು ಪಡಕೊಂಡೆ ಎಂಬ ಖುಷಿಗೆ ಸುಮ್ಮನಾದೆ. ಕಾಣದಕ್ಕೆ ಮಗಳು ಹೊರಗ